# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ವಾರ್ಡ್ 93, ವಸಂತನಗರ

### ವಾರ್ಡ್ ಸಮಿತಿ ಸಭೆಯ ನಡವಳಿಗಳು

ದಿನಾಂಕ: 21–12–2021 ರಂದು ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ, ವಾರ್ಡ್ ಕಛೇರಿಯಲ್ಲಿ ಶ್ರೀಮತಿ ಮಂಜುಳಮ್ಮ, ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ತಹಶಿಲ್ದಾರ್(ಚುನಾವಣೆ) ಬಿ.ಬಿ.ಎಂ.ಪಿ ರವರ ಅಧ್ಯಕ್ಷತೆಯಲ್ಲಿ ಸಮಿತಿ ಸಭೆಯನ್ನು ನಡೆಸಲಾದ ವಾರ್ಡ್ ಸಮಿತಿಯ ಸಭೆಯ ನಡವಳಿ:–

**ಈ ಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರುಗಳ ವಿವರಗಳು**

| | | |
|---|---|---|
| **ಸದಸ್ಯರುಗಳು** | | |
| 1 | ಶ್ರೀಮತಿ ಚಿತ್ರ ವೆಂಕಟೇಶ್ | ಸಮಿತಿ ಸದಸ್ಯರು |
| 2 | ಶ್ರೀ ರಾಜ್ ದುಗ್ಗಾರ್ | ಸಮಿತಿ ಸದಸ್ಯರು |
| 3 | ಶ್ರೀ ಲಕ್ಷ್ಮಣ್ | ಸಮಿತಿ ಸದಸ್ಯರು |
| **ಅಧಿಕಾರಿಗಳು** | | |
| 1 | ಶ್ರೀ ಮಹಮದ್ ಜಾವೇದ್ | ಸಹಾಯಕ ಕಾರ್ಯಪಾಲಕ ಅಭಿಯಂತರರು |
| 2 | ಕುಮಾರಿ ರೇಣುಕಾಂಬ | ಹಿರಿಯ ಆರೋಗ್ಯಾಧಿಕಾರಿ (ಎಸ್.ಹೆಚ್.ಐ) |
| 3 | ಶ್ರೀ ಮನೋಜ್ | ಕಿರಿಯ ಆರೋಗ್ಯಾಧಿಕಾರಿ |
| 4 | ಶ್ರೀ ಮೂರ್ತಿ | ಕಂದಾಯ ವಸೂಲಿಗಾರರು |
| 4 | ಶ್ರೀ.ತಿಮ್ಮೇಗೌಡ | ಸಹಾಯಕ ಕಾರ್ಯಪಾಲಕ ಅಭಿಯಂತರರು |
| **ಗೈರುಹಾಜರಾದವರು** | | |
| 1 | ಶ್ರೀ ನವೀನ್ ಕುಮಾರ್ | MOH |
| 2 | ಶ್ರೀ ಶ್ರೀನಿವಾಸ್ | ಸಹಾಯಕ ಅಭಿಯಂತರರು ಮೇಜರ್ ರೋಡ್ |
| 3 | ಲಿಂಗಯ್ಯ ಕೆ.ಬಿ ಬಸವರಾಜ್ | ಸಹಾಯಕ ಕಂದಾಯ ಅಧಿಕಾರಿಗಳು |
| 6 | ಡಾ॥ ಸಯ್ಯದ್ | ಪಿ.ಹೆಚ್.ಎಸ್ (ಪ್ರಾಥಮಿಕ ಆರೋಗ್ಯ ಕೇಂದ್ರ) |
| 7 | ಶ್ರೀಮತಿ ಪುಷ್ಪ | ಕಂದಾಯ ನಿರೀಕ್ಷಕರು |
| 8 | ಶ್ರೀಮತಿ ಮಂಜುಳ | ತೋಟಗಾರಿಕೆ ಅಧೀಕ್ಷಕರು |
| 10 | | ಸ್ಥಳೀಯ ಪೊಲೀಸ್ ಠಾಣಾಧಿಕಾರಿಗಳು (ಹೈಗ್ರೌಂಡ್/ಶೇಷಾದ್ರಿ ಪುರಂ) ಪೊಲೀಸ್ ಠಾಣೆ |
| 11 | | ಸ್ಥಳೀಯ ಸಂಚಾರ ಪೊಲೀಸ್ ಅಧಿಕಾರಿಗಳು (ಹೈಗ್ರೌಂಡ್/ಶೇಷಾದ್ರಿ ಪುರಂ) ಪೊಲೀಸ್ ಠಾಣೆ |
| 14 | | ಸ್ಥಳೀಯ ಸಹಾಯಕ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮಂಡಳಿ |
| 15 | | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ ನಿರ್ವಹಣೆ) |

ಸಭೆಯಲ್ಲಿ ನೋಡಲ್ ಅಧಿಕಾರಿಗಳಾದ ಶ್ರೀಮತಿ ಆರ್ ಮಂಜುಳಮ್ಮ ತಹಶೀಲ್ದಾರ್ (ಚುನಾವಣೆ) ರವರು ಎಲ್ಲರನ್ನು ಸ್ವಾಗತಿಸುತ್ತಾ, ಹಿಂದಿನ ಸಭೆಯ ಅನುಪಾಲನಾ ವರದಿಯನ್ನು ಸಭೆಗೆ ತಿಳಿಸಿದರು.

ಸಮಿತಿ ಸದಸ್ಯರು ವಾರ್ಡ್ ಸಮಸ್ಯಗಳ ಕುರಿತು ಮಾತಾನಾಡುತ್ತಾ, ಗುಲ್ಲಾಚಾಟ್ ಹತ್ತಿರ ಇರುವಂತಹ ಸಾರ್ವಜನಿಕ ಶೌಚಾಲಯವನ್ನು ಪುನರ್ ನಿರ್ವಹಣೆ ಮಾಡಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕ್ರಮವಹಿಸುವುದು ಹಾಗೂ 9ನೇ ಕ್ರಾಸ್, ರೈಲ್ವೆ ಪ್ಯಾರಲಲ್ ರಸ್ತೆಯಲ್ಲಿ ನೀರು ನಿಂತು ಸೊಳ್ಳೆ ಕಾಟ ಹೆಚ್ಚಾಗಿರುತ್ತದೆ. ಇದರಿಂದ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಇರುತ್ತದೆ. ಪ್ರಯುಕ್ತ ಸದರಿ ಜಾಗದಲ್ಲಿ ನೀರು ನಿಲ್ಲದಂತೆ, ಕ್ರಮವಹಿಸಲು ಸೂಚಿಸಿ, ಸ್ಥಳದಲ್ಲಿರುವ ಅಪಾರ್ಟ್‌ಮೆಂಟ್ ರವರಿಗೆ ನೋಟೀಸ್ ಜಾರಿಮಾಡುವಂತೆ ಶ್ರೀ ಜಾವೀದ್ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರಿಗೆ ಮನವಿ ಮಾಡಿದರು. ಸುಬ್ಬಯ್ಯ ಲೇಔಟ್ ಸ್ಯಾನಿಟರಿ ಪೈಪ್ ಬದಲಾವಣೆ ಮಾಡುವಂತೆ BWSS (ಬೆಂಗಳೂರು ನಗರ ನೀರು ಸರಬರಾಜು ಇಲಾಖೆ) ರವರಿಗೆ ಸೂಚಿಸಲು ತಿಳಿಸಿದರು. LED Lights Global Tender ನಿಲ್ಲಿಸಲಾಗಿದ್ದು, ಹಳೆಯ ಸ್ಟ್ರೀಟ್ ಲೈಟ್ ಪದ್ದತಿಯ ನಿರ್ವಹಣೆ ಮುಂದುವರಿಸಲು ಸೈಫುಲ್ಲಾ ರವರಿಗೆ ಸೂಚಿಸಲು ಸಭೆಗೆ ತಿಳಿಸಿದರು.

ಕ್ರಸೆಂಟ್ ರಸ್ತೆಯಲ್ಲಿ ಇರುವ ಎರಡು ಖಾಲಿ ನಿವೇಶನಗಳಲ್ಲಿ ಕಸ ಹಾಕುತ್ತಿರುವ ಮಾಲೀಕರಿಗೆ ನೋಟೀಸ್ ನೀಡುವಂತೆ ಹಾಗೂ ಸದರಿ ನಿವೇಶನಗಳಿಗೆ ಗೋಡೆ ನಿರ್ಮಾಣಕ್ಕೆ ಕ್ರಮವಹಿಸಬೇಕು, 1ನೇ ಮುಖ್ಯ ರಸ್ತೆಯಲ್ಲಿರುವ ಲೈಬ್ರರಿಯ ಛಾವಣಿ ಸೋರುತ್ತಿದ್ದು, ಅದನ್ನು ರಿಪೇರಿ ಮಾಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಕೋರಿದರು ಹಾಗೂ ಸದರಿ ಲೈಬ್ರರಿಯ ಪರಿಶೀಲನೆಗಾಗಿ ದಿನಾಂಕ: 22–12–2021ರ ಬುಧುವಾರದಂದು ಸಮಯ ಮದ್ಯಾಹ್ನ 12.00 ಗಂಟೆಗೆ ಹಾಜರಾಗುವುದಾಗಿ ಶ್ರೀ ಜಾವೀದ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಸಮಿತಿ ಸದಸ್ಯರ ಗಮನಕ್ಕೆ ತಂದರು.

11ನೇ ಮುಖ್ಯ ರಸ್ತೆಯಲ್ಲಿ ಇರುವ ಬಿಬಿಎಂಪಿ ಶಾಲೆಗೆ ಬೋರ್‌ವೇಲ್ ಹಾಗೂ ಸ್ಯಾನಿಟರಿ ಲೈನ್ ಅವಶ್ಯಕತೆ ಇರುವುದಾಗಿಯೂ ಹಾಗೂ ಮಿಲ್ಲರ್ಸ್ ರಸ್ತೆಯಲ್ಲಿರುವ ಸಾರ್ವಜನಿಕ ಶೌಚಾಲಯವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಉದ್ಘಾಟನೆ ಮಾಡಿರುವುದಿಲ್ಲ ಆದ್ದರಿಂದ, ಶೀಘ್ರವಾಗಿ ಉದ್ಘಾಟನೆ ಮಾಡುವಂತೆ ತಿಳಿಸಿರುವ ಮೇರೆಗೆ ಶ್ರೀ ಜಾವೀದ್ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರು ಮಾನ್ಯ ಶಾಸಕರು ಅನುಮತಿ ನೀಡಿದ ನಂತರ ಉದ್ಘಾಟನೆ ಮಾಡುವುದಾಗಿ ಸಭೆಗೆ ಸೂಚಿಸಿದರು.

ವಸಂತನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಾರ್ವಜನಿಕರಿಗಾಗಿ ಉಚಿತ ಔಷಧಿ ನೀಡಲು ಅವಕಾಶವಿರುತ್ತದೆ ಆದರೆ, ರಕ್ತದ ಒತ್ತಡ, ಸಕ್ಕರೆ ಖಾಯಿಲೆ ಮುಂತಾದ ಖಾಯಿಲೆಗಳಿಗೆ ಔಷಧಿ ನೀಡುತ್ತಿರುವುದಿಲ್ಲ. ಇದರಿಂದ, ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಪರಿಶೀಲಿಸಿ ಕ್ರಮವಹಿಸುವಂತೆ ಕುಮಾರಿ ರೇಣುಕಾಂಬ ಹಿರಿಯ ಆರೋಗ್ಯಾಧಿಕಾರಿ ರವರಿಗೆ ಸೂಚಿಸಲಾಗಿದೆ.

7ನೇ ಕ್ರಾಸ್, ಬಿಬಿಎಂಪಿ ಕಾಂಪ್ಲೆಕ್ಸ್ ಇಲ್ಲಿ ಬೆಸ್ಕಾಂ ಇಲಾಖೆಗೆ ಒಂದು ಕೊಠಡಿಯನ್ನು ನೀಡುವಂತೆ ಸಮಿತಿ ಸದಸ್ಯರು ಸಭೆಗೆ ಮನವಿ ಮಾಡಿರುವ ಪ್ರಯುಕ್ತ ಶ್ರೀ ಜಾವೀದ್ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರು ಬೆಸ್ಕಾಂ ಇಲಾಖೆಯವರು ಪತ್ರ ಮುಖೇನಾ ಕೋರಿದಲ್ಲಿ ಕೊಠಡಿಯನ್ನು ಒದಗಿಸುವ ಬಗ್ಗೆ ಪರಿಶೀಲಿಸುವುದಾಗಿ ಸದಸ್ಯರಿಗೆ ಮನವರಿಕೆ ಮಾಡಿದರು ಈ ಬಗ್ಗೆ ಶ್ರೀ ತಿಮ್ಮೇಗೌಡ, ಸಹಾಯಕ ಕಾರ್ಯಪಾಲಕ ಅಭಿಯಂತರರು ರವರಿಗೆ ಪತ್ರ ನೀಡುವಂತೆ ಸೂಚಿಸಿ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

R. Manjunatha
21/12/2021

| | |
|---|---|
| ನೋಡಲ್ ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |
| ವಾರ್ಡ್– 93, ವಸಂತನಗರ | ವಾರ್ಡ್– 93, ವಸಂತನಗರ |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. |

ಪ್ರತಿಯನ್ನು:–

1. ಮಾನ್ಯ ಆಡಳಿತಗಾರರು ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು(ಪೂರ್ವ ವಲಯ) ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಜಂಟಿ ಆಯುಕ್ತರು (ಪೂರ್ವ ವಲಯ) ಅವಗಾಹನೆಗೆ ಸಲ್ಲಿಸಿದೆ.
5. ಕಛೇರಿ ಕಡತಕ್ಕೆ.